ಶ್ರೀ ಕೆ. ಪೆಚ್. ಶ್ರೀನಿವಾಸ್— ಇನ್‌ಮೆಸ್ಟಿಗೇಷನ್‌ಗೆ ತೊಂದರೆಯಾಗುವುದಾದರೆ, ತಾವು ಆ ರೀತಿ ಹೇಳಿ ನಾವು ಸುಮ್ಮನೇ ಕುಳಿತುಕೊಳ್ಳುತ್ತೇವೆ. ಇನ್‌ಮೆಸ್ಟಿಗೇಷನ್‌ಗೆ ಬಾಧಕವಾಗುವುದಾದರೆ, ನಾವೇನೂ ತಮ್ಮನ್ನು ಒತ್ತಾಯ ಮಾಡುವುದಿಲ್ಲ.

ಶ್ರೀ ಬಿ. ರಾಚಯ್ಯ.—ಇನ್‌ಮೆಸ್ಟಿಗೇಷನ್‌ಗೆ ಸಹಾಯವಾಗಲಿ. ನಂದಕುಮಾರ್‌ನ ಸ್ಟೇಟ್‌ಮೆಂಟ್ ಇದೆ. ಮತ್ತೆ ಕೆಲವರನ್ನು ನಿನ್ನೆ ತಾನೇ ಹಿಡಿದಿದ್ದೇವೆ. ಅವರ ಹೇಳಿಕೆಗಳನ್ನು ಪಡೆದ ನಂತರ, ಎಲ್ಲವನ್ನೂ ಒಟ್ಟಿಗೇ ಸೇರಿಸಿ ಹೇಳಿಕೆ ಕೊಡುತ್ತೇನೆ.

ನಿಯಮ 334ರ ಮೇರೆಗೆ

ಜಿಲ್ಲಾ ಅಭಿವೃದ್ಧಿ ಮಂಡಲಿಯಂ ಸಭೆಗೆ ಪತ್ರಿಕಾ ಪ್ರತಿನಿಧಿಗಳಿಗೆ ಅವಕಾಶವಿಲ್ಲದಿರುವುದು.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಮಾನ್ಯ ಅಧ್ಯಕ್ಷರೇ, ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳ ಸಮೀಕ್ಷೆಯನ್ನು ಪರಿಶೀಲಿಸಿ ಸಲಹೆ ಕೊಡುವುದಕ್ಕಾಗಿ ಪ್ರತಿ ಮೂರು ತಿಂಗಳಿಗೊಮ್ಮೆ ಜಿಲ್ಲಾ ಅಭಿವೃದ್ಧಿ ಮಂಡಲಿಯ ಸಭೆ ಸೇರುವುದು ಪಾಡಿಕೆಯಂತೆ ನಡೆದುಕೊಂಡು ಬಂದಿದೆ. ಈ ತ್ರೈಮಾಸಿಕ ಸಭೆಯಲ್ಲಿ ಜಿಲ್ಲೆಯ ಅಧಿಕಾರಿಗಳು, ಸಂಸತ್ ಸದಸ್ಯರು, ವಿಧಾನಸಭೆ, ವಿಧಾನ ಪರಿಷತ್ ಸದಸ್ಯರು ಪಾಲ್ಗೊಳ್ಳುವರು.

ಈ ಸಭೆಗೆ ಹಲವಾರು ಜಿಲ್ಲೆಗಳಲ್ಲಿ ಪತ್ರಿಕಾ ಪ್ರತಿನಿಧಿಗಳಿಗೆ ಅವಕಾಶವಿಲ್ಲದಿರುವುದು ಅತ್ಯಂತ ವಿಷಾದದ ಸಂಗತಿಯಾಗಿದೆ. ಲೋಕಸಭೆ, ವಿಧಾನಮಂಡಲಗಳಂತಹ ರಾಷ್ಟ್ರದ ಹಾಗೂ ರಾಜ್ಯದ ಸಾರ್ವಭೌಮ ಸಭೆಗಳಿಗೆ ಪತ್ರಕರ್ತರಿಗೆ ಮುಕ್ತವಾದ ಪ್ರವೇಶವಿದೆ. ಅಲ್ಲಿ ನಡೆಯುವ ಕಲಾಪಗಳ ವರದಿಯನ್ನು ಪತ್ರಿಕೆಗಳು, ನಿರ್ಭಯವಾಗಿ ಪ್ರಕಟ ಮಾಡುತ್ತಾ ಬಂದಿವೆ. ಜಿಲ್ಲೆಯ ಅಭಿವೃದ್ಧಿ ಕಾರಿತು ನಡೆಯುವ ಸಭೆಗಳ ವರದಿ ಜನತೆಗೆ ತಿಳಿಯಬೇಕಾದರೆ, ಪತ್ರಿಕಾ ಮಾಧ್ಯಮವೊಂದೇ ಏಕೈಕ ಮಾರ್ಗ ಅಧಿಕಾರಿಗಳು ಯಾವುದೋ ಸಂಶಯಕ್ಕೊಳಗಾಗಿ ಈ ಸಭೆಯಲ್ಲಿ ಪತ್ರಿಕಾ ವರದಿಗಾರರು ಕುಳಿತುಕೊಳ್ಳಲು ಅವಕಾಶ ನೀಡುತ್ತಿಲ್ಲವೆಂದು ತಿಳಿದುಬಂದಿದೆ.

ಪತ್ರಿಕಾ ವರದಿಗಾರರಿಗೆ ಈ ಸಭೆಯಲ್ಲಿ ಅವಕಾಶವಿಲ್ಲವಾದರೆ, ತಾವು ಸರ್ಕಾರಿ ಸುದ್ದಿಗಳನ್ನೆಲ್ಲಾ ಬಹಿಷ್ಕರಿಸುವುದಾಗಿ ಕೆಲವು ಜಿಲ್ಲೆಯ ವರದಿಗಾರರು ಬೆದರಿಕೆ ಹಾಕಿದ್ದಾರೆ. ಅವರ ಈ ಬೆದರಿಕೆಯಲ್ಲಿ ಒಂದು ಅರ್ಥವಿದೆಯೆಂದು ನನ್ನ ಭಾವನೆ. ಜಿಲ್ಲಾ ಅಭಿವೃದ್ಧಿ ಮಂಡಳಿಯ ಸಭೆಯಲ್ಲಿ ಭಾಗವಹಿಸಲು ಪತ್ರಕರ್ತರಿಗೆ ಅವಕಾಶ ನೀಡದಿರುವುದು ಪತ್ರಿಕಾ ಸ್ವಾತಂತ್ರ್ಯಕ್ಕಾಗುವ ಧಕ್ಕೆಯೆಂದೇ ನಾನು ಹೇಳಬೇಕಾಗುತ್ತದೆ. ಇನ್ನು ಮಂಡಲಿಯಾದರೂ, ಜಿಲ್ಲಾ ಅಭಿವೃದ್ಧಿ ಮಂಡಳಿಯ ಸಭೆಯಲ್ಲಿ ಪತ್ರಕರ್ತರಿಗೆ ಮುಕ್ತ ಅವಕಾಶ ನೀಡಬೇಕೆಂದೂ ಈ ವಿಷಯದ ಕುರಿತು ಜಿಲ್ಲಾಧಿಕಾರಿಗಳಿಗೆ ಸ್ಪಷ್ಟವಾದ ಜರೂರು ಆದೇಶವನ್ನು ನೀಡಬೇಕೆಂದೂ ನಾನು ತಮ್ಮ ಮೂಲಕ ಅಭಿವೃದ್ಧಿ ಸಚಿವರ ಗಮನ ಸೆಳೆಯಲು ಬಯಸುತ್ತೇನೆ.

ಶ್ರೀ ಬಿ. ಆರ್. ಯಾವಗಲ್ (ಪಂಚಾಯತ್ ಮತ್ತು ಗ್ರಾಮಿಣಾಭಿವೃದ್ಧಿ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೆ, ಸದಸ್ಯರು ಈ ಸಭೆಯ ಗಮನಕ್ಕೆ ತಂದಂತಹ ವಿಷಯದ ಬಗ್ಗೆ ಜಿಲ್ಲಾ ಅಭಿವೃದ್ಧಿ ಮಂಡಳಿಗಳ ಸಭೆಗೆ ಇಲ್ಲಿಯವರೆಗೆ ಅದಕ್ಕೆ ಸಂಬಂಧಪಟ್ಟಂತೆ ಶಾಸಕರು ಭಾಗವಹಿಸಬಾರದು ಎಂಬ ನಿರ್ಬಂಧವೇನೋ ಕಾನೂನು ಪುಸ್ತಕಟ್ಟಿನಲ್ಲಿ ಇಲ್ಲ. ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿರುವುದರಿಂದ, ಕೆಲವರು ಆಹ್ವಾನಿತರಲ್ಲದ ವ್ಯಕ್ತಿಗಳಿಗೆ ಸಂದರ್ಭಕ್ಕನುಗುಣವಾಗಿ ತಕ್ಕಮಟ್ಟಿಗೆ ನಿರ್ಬಂಧ ಮಾಡಲು ಅವರಿಗೆ ಅವಕಾಶ ಉಂಟು. ಆದರೆ ನಿಯಮಾವಳಿಗಳು ಸ್ಪಷ್ಟವಾಗಿರುವುದರಿಂದ, ಹೊಸ ನಿಯಮಾವಳಿಗಳ ಅವಶ್ಯಕತೆ ಇಲ್ಲ. ಜಿಲ್ಲಾಧಿಕಾರಿಗಳು ಈ ಬಗ್ಗೆ ಕ್ರಮ ಕೈಗೊಳ್ಳುವ ಸಾಧ್ಯತೆ ಇದೆ.